# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **1181**

**ಮಾನ್ಯ ಸದಸ್ಯರ ಹೆಸರು** : **ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಉತ್ತರಿಸಬೇಕಾದ ದಿನಾಂಕ** : **07.03.2022**

**ಉತ್ತರಿಸಬೇಕಾದ ಸಚಿವರು** : **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು**

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಯಾಲಿಸಿಸ್ ಕೇಂದ್ರವನ್ನು ಹೊಂದಿರುವ ಸರ್ಕಾರಿ ಆಸ್ಪತ್ರೆಗಳು ಯಾವುವು; ಅವುಗಳಲ್ಲಿರುವ ಡಯಾಲಿಸಿಸ್ ಯಂತ್ರಗಳ ಸಂಖ್ಯೆ ಎಷ್ಟು; ಮಂಜೂರಾದ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಹುದ್ದೆಗಳು ಯಾವುವು; ಅವುಗಳ ನಿರ್ವಹಣೆಯ ಗುತ್ತಿಗೆಯನ್ನು ಪಡೆದ ಸಂಸ್ಥೆ ಯಾವುವು; ಗುತ್ತಿಗೆಯ ಅವಧಿಯಾವುದು; (ಗುತ್ತಿಗೆಕಾರರು ಪತ್ರದ ಪ್ರತಿಯನ್ನು ಒದಗಿಸುವುದು) | **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಯಾಲಿಸಿಸ್ ಕೇಂದ್ರವನ್ನು ಹೊಂದಿರುವ ಸರ್ಕಾರಿ ಆಸ್ಪತ್ರೆಗಳ ವಿವರ:** (see tables below) |

| ಉಡುಪಿ ಜಿಲ್ಲೆ | ದಕ್ಷಿಣ ಕನ್ನಡ ಜಿಲ್ಲೆ |
|---|---|
| 1. ಜಿಲ್ಲಾ ಆಸ್ಪತ್ರೆ ಉಡುಪಿ | ವೆನ್‌ಲಾಕ್ ಆಸ್ಪತ್ರೆ, ಮಂಗಳೂರು |
| 2. ತಾಲ್ಲೂಕು ಆಸ್ಪತ್ರೆ ಕಾರ್ಕಳ | ತಾಲ್ಲೂಕು ಆಸ್ಪತ್ರೆ, ಬಂಟ್ವಾಳ |
| 3. ತಾಲ್ಲೂಕು ಆಸ್ಪತ್ರೆ ಕುಂದಾಪುರ | ತಾಲ್ಲೂಕು ಆಸ್ಪತ್ರೆ, ಪುತ್ತೂರು |
| | ತಾಲ್ಲೂಕು ಆಸ್ಪತ್ರೆ, ಬೆಳ್ತಂಗಡಿ |
| | ತಾಲ್ಲೂಕು ಆಸ್ಪತ್ರೆ, ಸುಳ್ಯ |

**ಡಯಾಲಿಸಿಸ್ ಯಂತ್ರಗಳ ವಿವರ**

| ಉಡುಪಿ ಜಿಲ್ಲೆ | ದಕ್ಷಿಣ ಕನ್ನಡ ಜಿಲ್ಲೆ |
|---|---|
| 17 ಡಯಾಲಿಸಿಸ್ ಯಂತ್ರಗಳು | 33 ಡಯಾಲಿಸಿಸ್ ಯಂತ್ರಗಳು |

- ಡಯಾಲಿಸಿಸ್ ಕೇಂದ್ರಗಳಲ್ಲಿ ಸರ್ಕಾರದ ವತಿಯಿಂದ ಯಾವುದೇ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಹುದ್ದೆಗಳು ಮಂಜೂರಾಗಿರುವುದಿಲ್ಲ.
- ಡಯಾಲಿಸಿಸ್ ಕಾರ್ಯಕ್ರಮದಡಿಯಲ್ಲಿ ಚಾಲ್ತಿಯಲ್ಲಿರುವ ಒಪ್ಪಂದದ ಪ್ರಕಾರ ಗುತ್ತಿಗೆ ಪಡೆದ ಸಂಸ್ಥೆಯಿಂದ ಮಾನವ ಸಂಪನ್ಮೂಲ ಒದಗಿಸಬೇಕಾಗಿರುತ್ತದೆ. ಗುತ್ತಿಗೆ ಪಡೆದ ಸಂಸ್ಥೆಯು ವೈದ್ಯಾದಿಕಾರಿಗಳು, ಡಯಾಲಿಸಿಸ್ ಟೆಕ್ನಿಷಿಯನ್ ಹಾಗೂ ಶುಶ್ರೂಷಕರು ಡಯಾಲಿಸಿಸ್ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.
- ಡಯಾಲಿಸಿಸ್ ನಿರ್ವಹಣೆಯ ಗುತ್ತಿಗೆಯನ್ನು ಎಸ್ಕಾಗ್ ಸಂಜೀವಿನಿ ಪ್ರೈವೆಟ್ ಲಿಮಿಟೆಡ್, ಕೊಲ್ಕತ್ತಾ ಇವರು ಪಡೆದಿದ್ದು, ಗುತ್ತಿಗೆಯ ಅವಧಿ- ಮಾರ್ಚ್ 2017 ರಿಂದ ಮಾರ್ಚ್ 2022 ರವರೆಗೆ ಆಗಿರುತ್ತದೆ. ಗುತ್ತಿಗೆ ಕರಾರು ಪತ್ರದ ಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

| | | |
|---|---|---|
| ಆ) | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಡಯಾಲಿಸಿಸ್‌ನ್ನು ಪಡೆಯುತ್ತಿರುವ ರೋಗಿಗಳ ಸಂಖ್ಯೆ ಎಷ್ಟು; ಡಯಾಲಿಸಿಸ್ ಯಂತ್ರದ ಕೊರತೆಯಿಂದ ಹೆಸರು ನೋಂದಾಯಿಸಿ ಸರದಿಗಾಗಿ ಕಾಯುತ್ತಿರುವ ರೋಗಿಗಳ ಸಂಖ್ಯೆ ಎಷ್ಟು; ರೋಗಿಗಳ ಸಂಖ್ಯೆಗೆ ಅನುಗುಣವಾಗಿ ಅಗತ್ಯವಾದ, ಪ್ರಸ್ತುತ ಇರುವ ಮತ್ತು ಸುಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಯಾಲಿಸಿಸ್ ಯಂತ್ರಗಳ ಸಂಖ್ಯೆ ಎಷ್ಟು; ಕೊರತೆಯನ್ನು ಯಾವಾಗ ಸರಿಪಡಿಸಲಾಗುವುದು; (ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು) | • ಉಡುಪಿಯಲ್ಲಿ 141 ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 341 ರೋಗಿಗಳು ಸರ್ಕಾರಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೇವೆಯನ್ನು ಪಡೆಯುತ್ತಿದ್ದಾರೆ. ಡಯಾಲಿಸಿಸ್ ಯಂತ್ರದ ಕೊರತೆಯಿಂದ ಹೆಸರು ನೋಂದಾಯಿಸಿ ಸರದಿಗಾಗಿ ಕಾಯುತ್ತಿರುವ ರೋಗಿಗಳ ಸಂಖ್ಯೆ- 186 (109 ದಕ್ಷಿಣಕನ್ನಡ ಹಾಗೂ 77 ಉಡುಪಿ).<br>• ಪ್ರಸ್ತುತ 68 ಡಯಾಲಿಸಿಸ್ ಯಂತ್ರಗಳು ಲಭ್ಯವಿದ್ದು, 62 ಡಯಾಲಿಸಿಸ್ ಯಂತ್ರಗಳು ಸುಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಕೊರತೆಯನ್ನು ನೀಗಿಸಲು ಹೆಚ್ಚುವರಿ ಡಯಾಲಿಸಿಸ್ ಯಂತ್ರಗಳನ್ನು ಒದಗಿಸಲಾಗಿದೆ. ಇದಲ್ಲದೇ 2 ಪಾಳಿಯಲ್ಲಿರುವ ಡಯಾಲಿಸಿಸ್ ಸೇವೆಯನ್ನು 3 ಪಾಳಿಯಲ್ಲಿ ಒದಗಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. |
| ಇ) | ಡಯಾಲಿಸಿಸ್ ಯಂತ್ರಗಳ ನಿರ್ವಹಣೆಗೆ ಸರ್ಕಾರದಿಂದ ಬಿಡುಗಡೆಗೆ ಬಾಕಿಯಾಗಿರುವ ಅನುದಾನವೆಷ್ಟು; ಯಾವಾಗ ಬಿಡುಗಡೆ ಮಾಡಲಾಗುವುದು; ಗುತ್ತಿಗೆಯನ್ನು ಪಡೆದ ಏಜೆನ್ಸಿಯವರು ಡಯಾಲಿಸಿಸ್ ಕೇಂದ್ರವನ್ನು ಕರಾರಿನಂತೆ ನಿರ್ವಹಣೆ ಮಾಡದೇ ಇರುವುದರಿಂದ ಯಂತ್ರಗಳು ಹಾಳಾಗಿರುವುದು ಮತ್ತು ಸಿಬ್ಬಂದಿ ಕೊರತೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪೂರ್ಣ ಪ್ರಮಾಣದಲ್ಲಿ ಡಯಾಲಿಸಿಸ್ ಕೇಂದ್ರಗಳು ಕಾರ್ಯ ನಿರ್ವಹಣೆಗೆ ಸರ್ಕಾರದ ಕ್ರಮವೇನು? | • ಡಯಾಲಿಸಿಸ್ ಯಂತ್ರಗಳ ನಿರ್ವಹಣೆಗೆ ಸರ್ಕಾರದಿಂದ ಅನುದಾನ ಬಿಡುಗಡೆ ಆಗುವುದಿಲ್ಲ. ಡಯಾಲಿಸಿಸ್ ಯಂತ್ರಗಳ ನಿರ್ವಹಣೆ ಹಾಗೂ ಡಯಾಲಿಸಿಸ್ ಯಂತ್ರಗಳ ದುರಸ್ಥಿ ಮತ್ತು ಸಿಬ್ಬಂದಿಯನ್ನು ಒದಗಿಸುವ ಜವಾಬ್ದಾರಿಯು ಏಜೆನ್ಸಿಯವರದ್ದಾಗಿರುತ್ತದೆ.<br>• ಪೂರ್ಣ ಪ್ರಮಾಣದಲ್ಲಿ ಡಯಾಲಿಸಿಸ್ ಕೇಂದ್ರಗಳು ಕಾರ್ಯ ನಿರ್ವಹಿಸಲು ಹೆಚ್ಚುವರಿ ಡಯಾಲಿಸಿಸ್ ಯಂತ್ರಗಳನ್ನು ಒದಗಿಸಲಾಗಿದೆ ಮತ್ತು 2 ಪಾಳಿಯಲ್ಲಿರುವ ಡಯಾಲಿಸಿಸ್ ಸೇವೆಯನ್ನು 3 ಪಾಳಿಯಲ್ಲಿ ಒದಗಿಸಲು ಕ್ರಮವಹಿಸಲಾಗಿದೆ. |

**ಸಂಖ್ಯೆ: ಆಕುಕ 16 ಎಸ್.ಟಿ.ಕ್ಯೂ 2022**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು